OS 20/2022

PW-1

ದಿನಾಂಕಃ **14.03.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎ ಎನ್ ಆರ್ ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನನ್ನ ಪರವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಿಶಾನೆಗೊಳಿಸಬೇಕಾಗಿ ವಿನಂತಿ.

ದಿಃ 08.02.2021 ರ ನೋಂದಾಯಿತ ಕ್ರಯ ಒಪ್ಪಂದ ಕರಾರು ಪತ್ರ ನಿಪಿ.1 ಎಂದು, ಪ್ರತಿವಾದಿಯ ಜಿ ಪಿ ಎ ಹೋಲ್ಡರ ರವರ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಎ) ಎಂದು, ಸಾಕ್ಷಿದಾರರಾದ ಸೂರ್ಯನಾರಾಯಣ ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಬಿ) ಎಂದು, ಸಾಕ್ಷಿದಾರರಾದ ವಿರೇಶ ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಸಿ) ಎಂದು, ಪತ್ರ ಬರಹಗಾರಾರದ ರಾಮಚಂದ್ರಪ್ಪ ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ದಿಃ 10.02.2022 ರ ಕಾನೂನು ತಿಳುವಳಿಕೆ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ.2 ಎಂದು, ಅಂಚೆ ರಶೀದಿ ನಿಪಿ.3 ಎಂದು, ಜಾರಿಯಾಗದೇ ವಾಪಸ್ಸಾದ ಅಂಚೆ ನಿಪಿ.4 ಎಂದು, ನಿಪಿ.4 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿ ಅದರಲ್ಲಿರುವ ನೋಟಿಸಿನ ಮೂಲ ಪ್ರತಿಯನ್ನು ನಿಪಿ.4(ಎ) ಎಂದು, ದಿಃ 24.02.2022 ರಂದು 1 ನೇ ಪ್ರತಿವಾದಿ ಕಳುಹಿಸಿರುವ ರಿಪ್ಲೇ ನೋಟಿಸ್ ನಿಪಿ.5 ಎಂದು ಗುರುತಿಸಲಾಯಿತು.

ವಿನಂತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.